ಬಡ್ಡಿ ಮೀಸಲಾತಿ ನಿಯಮ

1793 - ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರ್) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ಸುಪ್ರೀಂ ಕೋರ್ಟಿನ ತೀರ್ಪಿನ ಪ್ರಕಾರ ಬಡ್ತಿ ಮಿಸಲಾತಿ ಬಗ್ಗೆ ಇರುವ ನಿಯಮಗಳು ಯಾವುವು?*

ಆ) *ಆಂಧ್ರ ; ತಮಿಳುನಾಡು ರಾಜ್ಯಗಳಲ್ಲಿ ಬಡ್ತಿ ಮಿಸಲಾತಿ ಬಗ್ಗೆ ಇರುವ ನಿಯಮಗಳು ಯಾವುವು?*

ಶ್ರೀ ಜೆ.ಹೆಚ್. ಪಟೀಲ್ (ಮುಖ್ಯಮಂತ್ರಿಗಳು) :

ಅ) ಸುಪ್ರೀಂ ಕೋರ್ಟ್ ಬಡ್ತಿಯಲ್ಲಿ ಮಿಸಲಾತಿಯ ಬಗ್ಗೆ ಕೆಲವು ತೀರ್ಪುಗಳನ್ನು ನೀಡಿದ್ದು, ಅವುಗಳಲ್ಲಿ ಇಂದ್ರಸಹಾನಿ ಪ್ರಕರಣದಲ್ಲಿ ನೀಡಿದ ತೀರ್ಪು (ಎ.ಐ.ಆರ್.1993. ಎಸ್.ಸಿ.477) ಪ್ರಾಮುಖ್ಯವಾಗಿದೆ. ಇದರನ್ವಯ ದಿನಾಂಕ : 27-10-1997ರ, ದಿನಾಂಕ : 11-11-1997ರ, ನಂತರದ ಆದೇಶ ಸಂಖ್ಯೆ ಡಿಪಿಎಆರ್ 21 ಎಸ್‌ಬಿಸಿ 97 ರಲ್ಲಿ ಈ ಸಂಪೂರ್ಣ ವಿಷಯದ ಪರಿಶೀಲನೆ ಆಗುವವರೆಗೆ, ನಿಲಂಬನೆಯಲ್ಲಿ ಇಡಲಾಗಿದೆ.

ಆ) ಈ ಮಾಹಿತಿ ಲಭ್ಯವಿಲ್ಲ.

ನೀರಾವರಿ ಯೋಜನೆಗಳ ಪ್ರಗತಿ

1795 - ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರು) : ಮಾನ್ಯ ಭಾರಿ ನೀರವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) *1997-98ನೇ ಸಾಲಿನಲ್ಲಿ ಯಾವ ಯಾವ ಬೃಹತ್ ನೀರಾವರಿ ಯೋಜನೆಗಳಿಗೆ ಎಷ್ಟು ಹಣ ನಿಗದಿ ಪಡಿಸಲಾಗಿತ್ತು.*

ಆ) *ಈ ಯೋಜನೆಗಳಿಗಾಗಿ 31-03-1998ರ ವರೆಗೆ ಮಾಡಿದ ಖರ್ಚು ಎಷ್ಟು.*

ಶ್ರೀ ಕೆ.ಎನ್. ನಾಗೇಗೌಡ. (ಭಾರಿ ನೀರಾವರಿ ಸಚಿವರು) :

ಅ) 1997-98ನೇ ಸಾಲಿನಲ್ಲಿ ಒಟ್ಟು 24 ಬೃಹತ್ ನೀರಾವರಿ ಯೋಜನೆಗಳನ್ನು ಪ್ರಗತಿಯಲ್ಲಿರುವ ಹಾಗೂ ಇನ್ನೂ ಪ್ರಾರಂಭಿಸಬೇಕಾಗಿರುವ ಯೋಜನೆಗಳು ಸೇರಿದಂತೆ ಆಯವ್ಯಯದಲ್ಲಿ ಸೇರಿಸಲಾಗಿದ್ದು, ಇವುಗಳಿಗೆ ಒಟ್ಟು 1684.38 ಕೋಟಿ ರೂ.ಗಳನ್ನು ನಿಗದಿಪಡಿಸಲಾಗಿದ್ದು ಈ ಪೈಕಿ 31-3-98ರ ಅಂತ್ಯಕ್ಕ 1241.21 ಕೋಟಿ ರೂ.ಗಳು ಖರ್ಚಾಗಿದೆ. ಇದರಲ್ಲಿ ಕೃಷ್ಣಾ ಭಾಗ್ಯ ಜಲ ನಿಗಮದಿಂದ ಕೃಷ್ಣಾ ಮೇಲ್ದಂಡೆ ಯೋಜನೆಗೆ ಒದಗಿಸಲಾದ 1167.13 ಕೋಟಿ ರೂ.ಗಳೂ ಹಾಗೂ ಇದರಡಿಯಲ್ಲಿ ಖರ್ಚಾದ 746.30 ಕೋಟಿ ಸೇರಿರುತ್ತದೆ (ಯೋಜನಾವಾರು ವಿವರಗಳನ್ನು ಲಗತ್ತಿಸಲಾಗಿರುವ ಅನುಬಂಧದಲ್ಲಿ ನೀಡಲಾಗಿದೆ).